ದಿನಾಂಕ ಃ 25.03.2022 ರಂದು ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಕೆ ಎಂ ಆರ್ ವಕೀಲರಿಂದ,

2 ಮತ್ತು 3 ನೇ ವಾದಿಯರು ನನ್ನ ಸಹೋದರಿಯರಾಗಿರುತ್ತಾರೆ. 3 ನೇ ಪ್ರತಿವಾದಿಯೂ ಸಹ ನನ್ನ ಸಹೋದರಿಯಾಗಿರುತ್ತಾರೆ. ನಾನು 12 ನೇ ವಯಸ್ಸಿನವಳಿದ್ದಾಗ ಮದುವೆ ಮಾಡಿರುತ್ತಾರೆ. ನನ್ನ ಮತ್ತು 2 ನೇ ವಾದಿಯ ಮದುವೆ ಒಂದೇ ಬಾರಿಯಾಗಿರುತ್ತದೆ. 1 ಪ್ರತಿವಾದಿಯ ಮದುವೆಯಾದ ನಂತರ 3 ನೇ ವಾದಿಯ ಮದುವೆಯಾಗಿರುತ್ತದೆ. 3 ನೇ ವಾದಿಯ ಮದುವೆಯಾಗಿ ಎಷ್ಟು ವರ್ಷಗಳಾಗಿರುತ್ತದೆ ಎಂದು ನನಗೆ ಈಗ ನೆನಪಿಲ್ಲ. ನನ್ನ ಮತ್ತು ನನ್ನ ಸಹೋದರಿಯರ ಮದುವೆಯ ಸಮಯದಲ್ಲಿ ನನ್ನ ತಂದೆ ಜೀವಂತ ಇದ್ದರು. ಅದೇ ರೀತಿ 1 ರಿಂದ 3 ನೇ ಪ್ರತಿವಾದಿಯರ ಮದುವೆಯಾದಗಲೂ ಸಹ ನನ್ನ ತಂದೆ ಜೀವಂತ ಇದ್ದರು ಎಂದರೆ ನಿಜ. ನನ್ನ ಮತ್ತು 2 ಹಾಗೂ 3 ನೇ ವಾದಿಯರ ಮದುವೆಯನ್ನು 2 ನೇ ಪ್ರತಿವಾದಿಯೇ ಮುಂದೆ ನಿಂತು ಮದುವೆ ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆಯೇ ಮದುವೆ ಮಾಡಿರುತ್ತಾರೆ ಎನ್ನುತ್ತಾರೆ. ನಮ್ಮ ಮದುವೆಗೆ 2 ನೇ ಪ್ರತಿವಾದಿಯೇ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮದುವೆಯ ಸಮಯದಲ್ಲಿ ನಾವು ಒಟ್ಟು ಕುಟುಂದಲ್ಲಿದ್ದೇವು ಎಂದರೆ ನಿಜ. ನಾನು ಮತ್ತು ನನ್ನ ಸಹೋದರ ಹಾಗೂ ಸಹೋದರಿಯರ ಬೇರೆ ಬೇರೆಯಾಗಿ ಎಷ್ಟು ವರ್ಷಗಳಾಗಿವೆ ಎಂದರೆ ಸಾಕ್ಷಿ ಎಲ್ಲರು ಮದುವೆಯಾದ ನಂತರ ಬೇರೆ ಬೇರೆಯಾಗಿರುತ್ತೇವೆ ಎನ್ನುತ್ತಾರೆ. ನಮ್ಮ ಕುಟುಂಬದಲ್ಲಿ ಯಾರ ಮದುವೆ ಕಡೆಯ ಮದುವೆಯ ಎಂದರೆ ಸಾಕ್ಷಿ 3 ನೇ ಪ್ರತಿವಾದಿಯ ಮದುವೆ ಕಡೆಯ ಮದುವೆಯಾಗಿದ್ದು, ಆ ಮದುವೆಗೆ ನಾನು ಹೋಗಿರುವುದಿಲ್ಲ. 3 ನೇ ಪ್ರತಿವಾದಿಯ ಮದುವೆಯಾದಾಗ ನಾನು ಮುದ್ದಟ್ಟುನೂರು ಗ್ರಾಮದಲ್ಲಿದ್ದೇನು.

ನನ್ನ ತಂದೆ 2001 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆಗೆ ಒಟ್ಟು 13 ಎಕರೆ ಆಸ್ತಿ ಇತ್ತು. ಸದರಿ ಆಸ್ತಿಯ ಸರ್ವೆ ನಂಬರ್ ಎಷ್ಟು ಎಂದರೆ ಸಾಕ್ಷಿ ಅವರು ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ಆಸ್ತಿಯನ್ನು ಮಾರಾಟ ಮಾಡಿ ಎಷ್ಟು ವರ್ಷಗಳಾಗಿವೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ತಂದೆಯೇ ಆಸ್ತಿಯನ್ನು ಮಾರಾಟ ಮಾಡಿರುತ್ತಾರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಾನು ವಾದ ಪತ್ರದಲ್ಲಿ 1 ಮತ್ತು 3ನೇ ಪ್ರತಿವಾದಿಯರು ಆಸ್ತಿಯನ್ನು ತೆಗೆದುಕೊಂಡಿರುತ್ತಾರೆ ಎಂದು ಹೇಳಿದ್ದು, ಯಾವಾಗ ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ದಾವೆಯನ್ನು ದಾಖಲು ಮಾಡಿದ ನಂತರ ಅವರು ಆಸ್ತಿಯನ್ನು ತೆಗೆದುಕೊಂಡಿಲ್ಲ ಎಂದು ನನಗೆ ಗೊತ್ತಾಗಿರುತ್ತದೆ ಎನ್ನುತ್ತಾರೆ. ನನಗೆ ವಿಷಯ ಗೊತ್ತಾದ ನಂತರ ವಾದ ಪತ್ರವನ್ನು ತಿದ್ದುಪಡಿ ಮಾಡಿಕೊಂಡಿರವುದಿಲ್ಲ ಎಂದರೆ ನಿಜ. ನಾನು ಎಲ್ಲಾ ದಾಖಲೆಗಳನ್ನು ತೆಗೆದುಕೊಂಡ ನಂತರ 1 ಮತ್ತು 3ನೇ ಪ್ರತಿವಾದಿಯರು ಆಸ್ತಿಯನ್ನು ತೆಗೆದುಕೊಂಡಿರುವುದಿಲ್ಲ ಎಂದು ಗೊತ್ತಾಗಿರುತ್ತದೆ. ದಾವೆಯನ್ನು ದಾಖಲು ಮಾಡುವಾಗ ಎಲ್ಲಾ ದಾಖಲೆಗಳನ್ನು ತೆಗೆದುಕೊಂಡು ದಾವೆಯನ್ನು ದಾಖಲು ಮಾಡಿದ್ದೇನೆ ಎಂದರೆ ಸಾಕ್ಷಿ ಆ ಸಮಯದಲ್ಲಿ ನನಗೆ ಕೆಲವು ದಾಖಲೆಗಳು ಸಿಕ್ಕಿಲ್ಲ ಎನ್ನುತ್ತಾರೆ. ಮುದ್ದಟ್ಟು ಗ್ರಾಮದ ಜಮೀನನ್ನು ನನ್ನ ತಂದೆ ಮೊದಲೇ ಮಾರಾಟ ಮಾಡಿದ್ದು ಆ ಜಮೀನಿನ ಸರ್ವೆ ನಂಬರ್ ನನಗೆ ಈಗ ಹೇಳಲು ಆಗುವುದಿಲ್ಲ. ದಾವೆಯನ್ನು ದಾಖಲು ಮಾಡುವಾಗ ದಾವಾ ಸ್ವತ್ತು ನನ್ನ ತಂದೆಗೆ ಸೇರಿರುವುದಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ. 125.ಬಿ/1 ರಲ್ಲಿರುವ 2 ಎಕರೆ 47 ಸೆಂಟ್ಸ್ ನ್ನು ಜಮೀನನ್ನು ನನ್ನ ತಂದೆ 1974 ರಲ್ಲಿ ಖರೀದಿಸಿರುತ್ತಾರೆ. ಸದರಿ ಜಮೀನನ್ನು 2ನೇ ಪ್ರತಿವಾದಿ 1997 ರಲ್ಲಿ ಹಳೆಕೊಟೆ ಶಂಕರಣ್ಣ ರವರಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 3 ನೇ ಸ್ವತ್ತಿನಲ್ಲಿ 13 ಸೆಂಟ್ಸ್ ಜಮೀನನ್ನು 2ನೇ ಪ್ರತಿವಾದಿ ಹನುಮಕ್ಕ ನವರಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಐಟಂ.ನಂ. 4 ನೇ ಸ್ವತ್ತಿನಲ್ಲಿ ನಾನು ಒಂದು ಎಕರೆ ಜಮೀನನ್ನು 1974 ರಲ್ಲಿ ಖರೀದಿಸಿರುತ್ತೇನೆ ಎಂದರೆ ನಿಜ. ಅದೇ ಸರ್ವೆ ನಂಬರ್ ನಲ್ಲಿ ನನ್ನ ತಂದೆಗೆ ಸೇರಿದ ಜಮೀನು ಸಹ ಇದೆ. ನಾನು ಜಮೀನನ್ನು ಖರೀದಿಸುವ ಸಮಯದಲ್ಲಿ ನನಗೆ 14-15 ವರ್ಷ ವಯಸ್ಸಾಗಿತ್ತು. ಖರೀದಿ ಪತ್ರದಲ್ಲಿ ನನ್ನ ಗಂಡನ ಹೆಸರನ್ನು ಬರೆದಿರುವುದಿಲ್ಲ ಎಂದರೆ ಸರಿಯಲ್ಲ ಆ ಸಮಯದಲ್ಲಿ ನನ್ನ ಮದುವೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಒಂದು ಎಕರೆ ಜಮೀನನ್ನು ನನ್ನ ತಂದೆ ಮತ್ತು 2 ನೇ ಪ್ರತಿವಾದಿ ಇಬ್ಬರು ಖರೀದಿಸಿ ನನ್ನ ಹೆಸರಿಗೆ ಮಾಡಿರಸಿರುತ್ತಾರೆ ಎಂದರೆ ಸರಿಯಲ್ಲ. 1992 ರಲ್ಲಿ ಸದರಿ ಒಂದು ಎಕರೆ ಜಮೀನನ್ನು 2 ನೇ ಪ್ರತಿವಾದಿಗೆ ನಾನು ಮಾರಾಟ ಮಾಡಿರುತ್ತೇನೆ ಎಂದರೆ ನಿಜ. ನನ್ನ ತಂದೆಯ ಎಲ್ಲಾ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಜಮೀನನ್ನು ಯಾರಿಗೆ ಮಾರಾಟ ಮಾಡಿದ್ದಾರೆ ಮತ್ತು ಯಾವಾಗ ಮಾರಾಟ ಮಾಡಿದ್ದಾರೆ ಎಂದು ದಾವೆಯಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿ ಅವರು ಜಮೀನನ್ನು ಮಾರಾಟ ಮಾಡಿಲ್ಲ ಎನ್ನುತ್ತಾರೆ.

ದಾವಾ ಐಟಂ ನಂ. 2 ರಲ್ಲಿರುವ ಸ್ವತ್ತುಗಳು ಎಲ್ಲಾ ಒಂದೇ ವಟಾರದಲ್ಲಿವೆ ಎಂದರೆ ನಿಜ. ಐಟಂ ನಂ.2 ರಲ್ಲಿ ಐದನೇ ಸ್ವತ್ತನ್ನು ನಾನು ಮತ್ತು ನನ್ನ ಗಂಡ ನಮ್ಮ ಹೆಸರಿಗೆ ಮ್ಯೂಟೇಷನ್ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ನಂತರ ನನ್ನ ಗಂಡನಿಗೆ ನನ್ನ ತಂದೆ ಕೊಟ್ಟಿರುತ್ತಾರೆ ಎನ್ನುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ದಾಖಲೆಗಳು ಪಂಚಾಯಿತಿ ಕಛೇರಿಯಲ್ಲಿವೆ. ನನ್ನ ಗಂಡನಿಗೆ ಮತ್ತು ನನ್ನ ತಂದೆಗೆ ಯಾವುದೇ ಪತ್ರ ವ್ಯವಹಾರ ಇರುವುದಿಲ್ಲ ಎಂದರೆ ನಿಜ. ನನ್ನ ಗಂಡನ ವಿರುದ್ಧ ನನ್ನ ತಂದೆ ದಬ್ಬಾಳಿಕೆಯಿಂದ ಭೂಮಿಯನ್ನು ಪ್ರವೇಶಿಸಿದ್ದಾರೆ ಎಂದು ದಾವೆಯನ್ನು ದಾಖಲು ಮಾಡಿದದ್ದಾರೆ ಎಂದರೆ ನಿಜ. ಸದರಿ ದಾವೆಯಲ್ಲಿ ನನ್ನ ತಂದೆಯ

ಪರವಾಗಿ ತೀರ್ಮಾನವಾಗಿರುತ್ತದೆ ಎಂದರೆ ಸಾಕ್ಷಿ ನನ್ನ ಗಂಡನ ಪರವಾಗಿ ತೀರ್ಮಾನವಾಗಿರುತ್ತದೆ ಎನ್ನುತ್ತಾರೆ. ಐಟಂ ನಂ. 2 ರಲ್ಲಿನ 1 ರಿಂದ 4 ನೇ ಸ್ವತ್ತುಗಳು 2 ನೇ ಪ್ರತಿವಾದಿಯ ಸ್ವತ್ತುಗಳು ಎಂದರೆ ಸರಿಯಲ್ಲ. ಐಟಂ ನಂ. 2 ರಲ್ಲಿರುವ 4 ನೇ ಸ್ವತ್ತನ್ನು ನನ್ನ ತಂದೆ ನನ್ನ ತಾಯಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ನಿಜ. ನನ್ನ ತಂದೆಯ ಕೊನೆಗಾಲದವರೆಗೂ 2 ನೇ ಪ್ರತಿವಾದಿಯೇ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯೇ ನನ್ನ ತಾಯಿಯನ್ನು ನೊಡಿಕೊಳ್ಳುತ್ತಿರುವ ಕಾರಣ ನನ್ನ ತಾಯಿ ಸದರಿ ಸ್ವತ್ತನ್ನು 2 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ನನ್ನ ತಂದೆ ಭೂಮಿಯನ್ನು ಕೊಟ್ಟಿರುವುದಿಲ್ಲ. ದಾವಾ ಸ್ವತ್ತುಗಳನ್ನು ಹೊರತು ಪಡಿಸಿ ಸರ್ವೆ ನಂ. 325.ಬಿ. 5 ಎಕರೆ 95 ಸೆಂಟ್ಸ್ ಇತ್ತು ಎಂದರೆ ಸಾಕ್ಷಿ ಆ ಜಮೀನನ್ನು ಅವರು ಮಾರಾಟ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಸದರಿ 5 ಎಕರೆ 95 ಸೆಂಟ್ಸ್ ಜಮೀನನಲ್ಲಿ ಒಂದು ಎಕರೆ ಜಮೀನನ್ನು ರಂಗಪ್ಪ ರವರಿಗೆ ದಾನ ಮಾಡಿರುತ್ತಾರೆ ಎಂದರೆ ನಿಜ. ಅದೇ ರೀತಿ 3 ನೇ ಪ್ರತಿವಾದಿಗೆ 1 ಎಕರೆ 50 ಸೆಂಟ್ಸ್ ಜಮೀನನ್ನು ದಾನ ಮಾಡಿದಾದರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಸ್ವತಃ ಅವರು ಮಾರಾಟ ಮಾಡಿರುವುದು ಗೊತ್ತು ಎನ್ನುತ್ತಾರೆ. ನಾವೆಲ್ಲಾ ಒಂದೇ ಕುಟುಂಬದ ಸದಸ್ಯರಾಗಿದ್ದು ನನಗೆ ಎಲ್ಲಾ ಮಾಹಿತಿ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಸ್ವತ್ತುಗಳನ್ನು ತಪ್ಪಿಸುವ ಉದ್ದೇಶದಿಂದ ಇತರೆ ಪ್ರತಿವಾದಿಗಳೊಂದಿಗೆ ಸೇರಿಕೊಂಡು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ಒಂದು ಎಕರೆ ಜಮೀನು ಖರೀದಿ ಮಾಡಿದ ಪತ್ರದಲ್ಲಿ ಚಾನಾಳು ಗ್ರಾಮದ ಫ್ಲಾಟ್ ಬಗ್ಗೆ ಬರೆದಿದೆ ಎಂದರೆ ನನಗೆ ಗೊತ್ತಿಲ್ಲ. ಕ್ಯಾದಿಗೆ ಹಾಳ್ ಗ್ರಾಮದಲ್ಲಿಯೂ ಸಹ ಅದೇ ಫ್ಲಾಟ್ ನಲ್ಲಿ ನನ್ನ ತಂದೆಗೆ ಜಮೀನು ಇದೆ ಎಂದರೆ ಸರಿಯಲ್ಲ.

ಸರ್ವೆ ನಂ. 118/ಬಿ ಮತ್ತು 117/ಬಿ ರಲ್ಲಿ ನನ್ನ ತಂದೆ ಜಮೀನು ಖರೀದಿಸಿದ ಸಂದರ್ಭದಲ್ಲಿ ಸಿಂಧಿಗೇರಿ ಗ್ರಾಮದಲ್ಲಿ ಫ್ಲಾಟ್ ಗಳನ್ನು ಖರೀದಿಸಿರುತ್ತಾರೆ ಎಂರದೆಸ ರಿಯಲ್ಲ, ಸದರಿ ಫ್ಲಾಟ್ ಯಾರ ಸ್ವಾಧೀನದಲ್ಲಿವೆ ಎಂದರೆ ಸಾಕ್ಷಿ ನನ್ನ ತಂದೆ ಫ್ಲಾಟ್‌ಗಳನ್ನೆ ಖರೀದಿಸಿಲ್ಲ ಎನ್ನುತ್ತಾರೆ. 2 ನೇ ಪ್ರತಿವಾದಿ ಸದರಿ ಆಸ್ತಿಗಳನ್ನು ಖರೀದಿಸಿರುವ ಕಾರಣ 1996-97 ರಿಂದಲೂ ಅವರ ಹೆಸರಿನಲ್ಲಿ ದಾಖಲೆಗಳಲ್ಲಿವೆ ಎಂದರೆ ಸರಿಯಲ್ಲ. ಯಾವಾ ಆಧಾರದ ಮೇರಗೆ 2 ನೇ ಪ್ರತಿವಾದಿಯ ಹೆಸರಿಗೆ ಸ್ವತ್ತುಗಳು ಬಂದಿರುತ್ತವೆ ಎಂದು ಮ್ಯೂಟೇಷನ್ ಗಳನ್ನು ಹಾಜರು ಮಾಡಿಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ಅದಲಿ-ಬದಲಿ ಆಧಾರದಲ್ಲಿ ಬಂದಿರುತ್ತವೆ ಎನ್ನುತ್ತಾರೆ. ಹಾವಿನ ಹಾಳ್ ಗ್ರಾಮದ ಸರ್ವೆ ನಂ. 92 ನಲ್ಲಿ 3 ಎಕರೆ 37 ಸೆಂಟ್ಸ್ ಜಮೀನ್ನು ಇತ್ತು ಎಂದರೆ ಸಾಕ್ಷಿ ಅದನ್ನು ಮಾರಾಟ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ನನ್ನ ತಂದೆ ಮಾರಾಟ ಮಾಡಿರುತ್ತಾರೆ ಎಂದು ಹೇಳಿದ ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನಿಜ. ಈಗ ನಮಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ೃಂದರೆ ಸರಿಯಲ್ಲ, ದಾವಾ ಸ್ವತ್ತುಗಳನ್ನು 2 ನೇ ಪ್ರತಿವಾದಿ ನೊಂದಾಯಿತ ದಾಖಲೆಗಳ ಮುಖಾಂತರ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

( ನನ್ನ ಹೇಳಿಕೆಯಂತೆ ಮುಕ್ತನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ,

ಸೀನಿಯರ್ ಸಿವಿಲ್ ನ್ಯಾಯಾಧೀಶರು, ಸಿರುಗುಪ್ಪ.